ಶ್ರೀ ಎಂ.ಸಿ.ನಾಣಯ್ಯ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಸಭಾಧ್ಯಕ್ಷರೇ, ಮಾನ್ಯ ಸದಸ್ಯರು ಹೇಳಿದಂತಹ ವಿಚಾರದ ಬಗ್ಗೆ ನಾನು ಒಪ್ಪುತ್ತೇನೆ. ಪಾರ್ಲಿಮೆಂಟ್‌ನಲ್ಲಿ ಪ್ರತಿ ನಿತ್ಯ ಚರ್ಚಿಸತಕ್ಕ ವಿಷಯಗಳನ್ನು ಹೊರತು ಪಡಿಸಿ ದೇಶವನ್ನೇ ಗಮನದಲ್ಲಿಟ್ಟುಕೊಂಡು, ದೇಶ ಎದುರಿಸುತ್ತಿರುವ ಸಮಸ್ಯೆಗಳ ಬಗ್ಗೆ, ದೇಶವನ್ನು ಮುಂದೆ ಹೇಗೆ ತೆಗೆದುಕೊಂಡು ಹೋಗಬೇಕು ಎನ್ನುವುದರ ಬಗ್ಗೆ ಚರ್ಚೆ ಮಾಡಲಾಗುತ್ತದೆ. ಆ ಬಗ್ಗೆ ಇಲ್ಲಿಯೂ ಚರ್ಚೆ ಮಾಡಲು ಮಾನ್ಯ ಅಧ್ಯಕ್ಷರು ಎರಡು ದಿವಸ ನಿಗದಿ ಮಾಡಲಿ. ಆದರೆ ಅಲ್ಲಿ ಚರ್ಚೆ ನಡೆಯುತ್ತಿದೆ ಎಂಬ ಕಾರಣದಿಂದ ನಾವು ಇಲ್ಲಿ ಸದನವನ್ನು ಮುಂದೂಡುವುದು ಬೇಡ.

ಅಧ್ಯಕ್ಷರು: ಮಾನ್ಯ ಸದಸ್ಯರು ಪಾರ್ಲಿಮೆಂಟ್‌ನಲ್ಲಿ ನಡೆಯುವ ಚರ್ಚೆಯನ್ನು ಲೈವ್ ರಿಲೇ ಮಾಡಲಾಗುತ್ತದೆ, ಅದನ್ನು ತಾವು ವೀಕ್ಷಿಸಬೇಕು, ಆದ್ದರಿಂದ ಅದನ್ನು ನೋಡಲಿಕ್ಕೆ ಅನುಕೂಲ ಮಾಡಿಕೊಡುವ ಸಲುವಾಗಿ ಸದನ ಮುಂದೂಡಬೇಕು ಎಂದು ಹೇಳುತ್ತಿದ್ದಾರೆ.

ಶ್ರೀ ಎಂ.ಸಿ.ನಾಣಯ್ಯ: ಮಾನ್ಯ ಅಧ್ಯಕ್ಷರೇ, ಕೇವಲ ಅದಕ್ಕೋಸ್ಕರವೇ ನಾವು ಸದನವನ್ನು ಮುಂದೂಡುವುದಕ್ಕಿಂತ, ಪಾರ್ಲಿಮೆಂಟ್‌ನಲ್ಲಿ ನಡೆಯತಕ್ಕ ಚರ್ಚೆಯ ನಡವಳಿಗೆಳನ್ನೆಲ್ಲಾ ತಮ್ಮ ಕಛೇರಿಯ ಮುಖಾಂತರವೇ ತರಿಸಿಕೊಳ್ಳೋಣ. ತದನಂತರ ತಾವು ಇಲ್ಲಿಯೂ ಕೂಡ ಎರಡು ದಿವಸ ಆ ಬಗ್ಗೆ ಚರ್ಚೆ ನಡೆಸಲು ಅನುವು ಮಾಡಿಕೊಡಿ. ನಾವಿಲ್ಲಿ ಆ ಬಗ್ಗೆ ಚರ್ಚೆ ಮಾಡೋಣ.

ಅಧ್ಯಕ್ಷರು: ಮಾನ್ಯ ಕಾಗೋಡು ತಿಮ್ಮಪ್ಪನವರು ಹಾಗೂ ವಾಟಾಳ್ ನಾಗರಾಜ್‌ರವರು ಒಂದೇ ವಿಷಯವನ್ನು ಪ್ರಸ್ತಾಪಿಸಲು ಅನುಮತಿ ಕೋರಿದ್ದಾರೆ. ಮಾನ್ಯ ತಿಮ್ಮಪ್ಪನವರ ನೋಟೀಸ್ ನನಗೆ ರೈಟಿಂಗ್‌ನಲ್ಲಿ ಮೊದಲು ಬಂದಿದೆ. ಆದ್ದರಿಂದ ದಯವಿಟ್ಟು ಮೊದಲು ಮಾನ್ಯ ಕಾಗೋಡು ತಿಮ್ಮಪ್ಪನವರು ಪ್ರಸ್ತಾಪಿಸಲಿ. ನಂತರ ಮಾನ್ಯ ವಾಟಾಳ್ ನಾಗರಾಜ್‌ರವರಿಗೂ ನಾನು ಪ್ರಸ್ತಾಪಿಸಲು ಅವಕಾಶ ಮಾಡಿಕೊಡುತ್ತೇನೆ.

(ಊ) ವೀರಪ್ಪನ್ ತನ್ನ ಹಿಡಿತದಲ್ಲಿರುವಂತಹ ಒತ್ತೆಯಾಳುಗಳನ್ನು ಬಿಡುಗಡೆ ಮಾಡುವ ಷರತ್ತಿಗೆ ಒಪ್ಪಿರುವ ವಿಚಾರ.

+ ಶ್ರೀ ಕಾಗೋಡು ತಿಮ್ಮಪ್ಪ (ಸಾಗರ): ಮಾನ್ಯ ಅಧ್ಯಕ್ಷರೇ, ವೀರಪ್ಪನ್ ತನ್ನ ಹಿಡಿತದಲ್ಲಿದ್ದಂತಹ ಒತ್ತೆಯಾಳುಗಳನ್ನು ಬಿಡುಗಡೆ ಮಾಡುವ ಷರತ್ತಿಗೆ ಒಪ್ಪಿ ಇವತ್ತು ಅವರನ್ನು ಬಿಡುಗಡೆ ಮಾಡುವುದಾಗಿ ಪ್ರಕಟಣೆಯಾಗಿದೆ. ಆದರೆ ಸಾರ್ವಜನಿಕವಾಗಿ ಅವರನ್ನು ಹೊರಗಡೆ ಬಿಟ್ಟಿಲ್ಲ. ಅವರನ್ನು ಬಿಡುಗಡೆ ಮಾಡಿದ್ದಾರೆ ಎಂದು ಹೇಳಿದರೂ ಕೂಡ ಇನ್ನೂ ಒಂದು ರೀತಿಯ ಬಂಧನದಲ್ಲೇ ಆ ಜನರಿದ್ದಾರೆ. ಆದರೆ

ಇಲ್ಲಿಯವರೆಗೂ ಒತ್ತೆಯಾಳುಗಳನ್ನು ಬಿಡುಗಡೆ ಮಾಡತಕ್ಕ ಸಂದರ್ಭದಲ್ಲಿ ವೀರಪ್ಪನ್ ಸಹಾ ಶರಣಾಗತಿ ಆಗುತ್ತಾನೆ ಎನ್ನುವಂತಹ ನಂಬಿಕೆಯನ್ನು ಸಾರ್ವಜನಿಕರಲ್ಲಿ ಮೂಡಿಸಲಾಗಿತ್ತು ಮತ್ತು ಸರ್ಕಾರ ಕೂಡ ಆ ಭರವಸೆಯನ್ನು ನಂಬಿತ್ತು. ಆದರೆ ಇವತ್ತಿನ ಪತ್ರಿಕೆಗಳನ್ನು ಓದಿದಾಗ ಆತ ಕೆಲವೊಂದು ಹೊಸದಾಗಿ ಷರತ್ತುಗಳನ್ನು ಹಾಕಿದ್ದಾನೆ. ಇವು ಒಂದು ರೀತಿಯ ಸಂಶಯಕ್ಕೆ ಎಡೆ ಮಾಡಿಕೊಡುತ್ತದೆ. ವೀರಪ್ಪನ್ ಶರಣಾಗತಿ ವಿಚಾರದಲ್ಲಿ ಅಪನಂಬಿಕೆ ಬರುವುದಕ್ಕೆ ಇವತ್ತು ಈ ಷರತ್ತುಗಳು ಕಾರಣವಾಗಿದೆ ಎನ್ನತಕ್ಕಂತಹ ಮಾತು ಕೇಳಿ ಬರುತ್ತಿದೆ. ವೀರಪ್ಪನ್ ಎಂತಹ ಷರತ್ತುಗಳನ್ನು ಹಾಕಿದ್ದಾನೆ ಎಂದರೆ, 'ಯಾರಿಗೂ ಕೋಳ ತೊಡಿಸಬಾರದು', 'ತಾವು ಅಡಿಗೆ ಮಾಡಿಕೊಳ್ಳಲು ಅವಕಾಶ ಇರಬೇಕು','ಕೋಳಿ ಮತ್ತು ಮಾಂಸದ ಪೂರೈಕೆ ಅಬಾಧಿತವಾಗಿರಬೇಕು' ಎಂಬ ಷರತ್ತುಗಳನ್ನು ಆತ ವಿಧಿಸಿದ್ದಾನೆ. ನಕ್ಕೀರನ್ ಸಂಪಾದಕ ತಂದು ಕೊಟ್ಟಿರುವ ಕ್ಯಾಸೆಟ್‌ಗಳಲ್ಲಿ ವೀರಪ್ಪನ್ ಈ ಷರತ್ತುಗಳನ್ನು ವಿಧಿಸಿದ್ದಾನೆ. ಆ ಕ್ಯಾಸೆಟ್‌ನಲ್ಲಿ ಇರುವಂತಹ ವಿಷಯಗಳನ್ನು ತಿಳಿದಂತಹ ಜನರು, ಪತ್ರಿಕೆಯವರು ಆ ಬಗ್ಗೆ ವರದಿ ಮಾಡಿದ್ದಾರೆ. ಒತ್ತೆಯಾಳುಗಳನ್ನು ಬಿಡುಗಡೆ ಮಾಡಲಾಗಿದೆ ಎಂದು ಹೇಳಿದ್ದರೂ ಕೂಡ ಅವರು ಇನ್ನೂ ಕರ್ನಾಟಕ ಸರ್ಕಾರ ಅಥವಾ ತಮಿಳು ನಾಡು ಸರ್ಕಾರಗಳ ವಶಕ್ಕಾಗಲೀ ಬಂದಿಲ್ಲ. ಅವರು ಇನ್ನೂ ಮಧ್ಯಂತರದಲ್ಲೇ ಇದ್ದಾರೆ. ಇದರಿಂದಾಗಿ ಜನರಲ್ಲಿ ಒಂದು ರೀತಿಯ ಸಂಶಯ ಮೂಡಿದೆ. ಅವರು ಆಕಾಶದಲ್ಲೂ ಇಲ್ಲ, ಭೂಮಿಯಲ್ಲೂ ಇಲ್ಲ, ಅವರು ಒಂದು ರೀತಿ ಮಧ್ಯಂತರದಲ್ಲೇ ಇದ್ದಾರೆ. ಇದು ಒಂದು ಭಾಗ....

ಅಧ್ಯಕ್ಷರು: ನಾನು ನನಗೆ ತೋಚಿದ ಒಂದು ಮಾತನ್ನು ತಮಗೆ ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಈ ರಾಜ್ಯದಲ್ಲಿ ವೀರಪ್ಪನ್ ವಿಚಾರಕ್ಕೆ ಸಂಬಂಧಿಸಿದಂತೆ ಎರಡು ವರ್ಗದ ಜನರಿದ್ದಾರೆ. ಕುತೂಹಲದಿಂದ, ಉತ್ಸುಕತೆಯಿಂದ ಇದು ಯಾವ ತಿರುವು ಪಡೆಯುತ್ತದೆಯೋ ಎಂದು ನೋಡುತ್ತಿರತಕ್ಕ, ಇಷ್ಟೆಲ್ಲಾ ಸಮಸ್ಯೆ ಉಂಟು ಮಾಡಿದ ಮನುಷ್ಯ ಏನು ಮಾಡುತ್ತಾನೋ ಎಂದು ನೋಡುವವರು ಒಂದು ವರ್ಗದ ಜನರಾಗಿದ್ದಾರೆ. ಇನ್ನೊಂದು ವರ್ಗದ ಜನರು ಯಾರು ಅಂದರೆ, ಯಾರು ಈತನ ದಾಳಿಗೆ ಅನೇಕ ಸಂದರ್ಭಗಳಲ್ಲಿ ತುತ್ತಾಗಿ, ಅವರು ಬಿಟ್ಟು ಹೋಗಿರತಕ್ಕಂತಹ ಅವರ ಪರಿವಾರದವರು, ಆಫೀಸರ್‌ಗಳು ಅಥವಾ ಮತ್ತೊಬ್ಬರು. ಈ ಪತ್ರಿಕೆಗಳಲ್ಲಿ ಮತ್ತು ನಮ್ಮ ಚರ್ಚೆಯ ಮುಖಾಂತರ, ಈಗ ನೀವೇನೋ ಹೇಳಿದಿರಲ್ಲಾ, ಆತ ಏನೇನೋ ಷರತ್ತುಗಳನ್ನು ಹಾಕಿದ್ದಾನೆ ಅಂತ, ಇದೆಲ್ಲಾ ನಾಳೆ ಮತ್ತೆ ಪತ್ರಿಕೆಗಳಲ್ಲಿ ಅಚ್ಚಾದಾಗ, ತಮಗೊಂದು ಉದಾಹರಣೆ ಹೇಳುವುದಾದರೆ, ಯಾರಾದರೂ ಒಬ್ಬ ಆಫೀಸರ್ ಕಳೆದುಕೊಂಡಿರುವವರು, ಅವರ ತಂದೆಯೋ, ತಾಯಿಯೋ ಉಳಿದಿರುತ್ತಾರೆ, ಅವರಿಗೆ ಇದನ್ನೆಲ್ಲಾ ನೋಡಿದಾಗ ಏನಾಗುತ್ತದೆ ಎಂಬುದನ್ನು ತಾವು ಯೋಚಿಸಬೇಕು? ಪಾಪ, ಅವರಿಗೆ ಪೂರ್ಣವಾಗಿ ಎಲ್ಲವನ್ನೂ ಅಧ್ಯಯನ ಮಾಡುವಷ್ಟು ತಾಳ್ಮೆ ಇರುವುದಿಲ್ಲ. ಆ ಹೊಟ್ಟೆಯುರಿ ಒಂದು ಕಡೆ ಇರುತ್ತದೆ, ಅಲ್ಲದೇ ಅವರು ಮತ್ತಷ್ಟು ವ್ಯಾಕುಲರಾಗುತ್ತಾರೆ.

ಆದ್ದರಿಂದ ಏನು ಕಂಡೀಷನ್ ಇದೆಯೋ ಏನೋ, ಒತ್ತೆಯಾಳುಗಳನ್ನು ಬಿಡುಗಡೆ ಮಾಡುತ್ತಾರೆ ಎನ್ನುವಂತಹ ಒಂದು ವರ್ತಮಾನ ಬಂದಿದೆ. ಅವರು ಬಿಡುಗಡೆಯಾಗಿ ಜೀವಂತ ರೂಪದಲ್ಲಿ ನಮ್ಮ ಎದುರಿಗೆ ಬಂದು ಬಿಡಲಿ. ಆಮೇಲೆ ಉಳಿದಿದ್ದನ್ನು ಏನು ಮಾಡುತ್ತಾರೋ ನೋಡೋಣ. ನಾನು ಆ ದೃಷ್ಟಿಯಿಂದ ತಮ್ಮಲ್ಲಿ, ವಿನಂತಿ ಮಾಡಿಕೊಳ್ಳುತ್ತೇನೆ, ತಾವು ನಮಗಿಂತ ಬಹಳ ಹಳಬರಿದ್ದೀರಿ, ಅನುಭವಿಗಳು ಇದ್ದೀರಿ, ಮಾನವೀಯ ಮೌಲ್ಯಗಳನ್ನು ಹೆಚ್ಚು ಆರಾಧನೆ ಮಾಡತಕ್ಕ ಗುಣ ತಮ್ಮಲ್ಲಿರುವುದರಿಂದ, ಈ ಕಾರಣದಿಂದ ಇದಿಲ್ಲಿ ಚರ್ಚೆಯಾಗಬೇಕೇ ಎಂದು ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತಿದ್ದೇನೆ.

ಶ್ರೀ ಕಾಗೋಡು ತಿಮ್ಮಪ್ಪ: ಮಾನ್ಯ ಅಧ್ಯಕ್ಷರೇ, ತಾವು ಹೇಳಿದ್ದನ್ನು ನಾನು ಒಪ್ಪುತ್ತೇನೆ. ನಮಗೆ ಸಂಶಯ ಏಕೆಂದರೆ, ಈಗಾಗಲೇ ಸರ್ಕಾರ ಈ ದಿಸೆಯಲ್ಲಿ ಬಹಳ ಮುಂದೆ ಹೋಗಿ ಬಿಟ್ಟಿದೆ. ಅವನ ಷರತ್ತುಗಳಿಗೆ ಒಪ್ಪಿ ಕೆಲವು ಹಂತದಲ್ಲಿ ನಿರ್ಣಯಗಳನ್ನು ತೆಗೆದುಕೊಂಡು ತೀರ್ಮಾನಕ್ಕೆ ಬರುವಂತಹ ಹಂತಗಳಲ್ಲಿ ನಾವು ಇರುವುದಿಲ್ಲ. ಆದರೆ ಸಾರ್ವಜನಿಕವಾಗಿ ಸಂಶಯಕ್ಕೆ ಅವಕಾಶ ಬರುವ ರೀತಿಯಲ್ಲಿ ಏನು ವದಂತಿ ಹಬ್ಬಿದೆ, ಅದಕ್ಕೆ ಸರ್ಕಾರ ಸ್ಪಷ್ಟನೆ ನೀಡಬೇಕಾದಂತಹ ಅಗತ್ಯ ಇದೆ. ನಾನು ಆ ದೃಷ್ಟಿಯಿಂದಲೇ ಈ ಪ್ರಶ್ನೆಯನ್ನು ಪ್ರಸ್ತಾಪಿಸಿದ್ದೇನೆ.

ಅಧ್ಯಕ್ಷರು: ಆಯಿತು, ತಾವು ಹೇಳಿದ್ದನ್ನು ನಾನು ಒಪ್ಪುತ್ತೇನೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಅಧ್ಯಕ್ಷರೇ, ಅನೇಕ ಸಾರಿ ತಮಗೆ ಗೊತ್ತಿದೆ, ಇಲ್ಲಿ ಪ್ರಸ್ತಾಪ ಮಾಡದೇ ಇರತಕ್ಕ ಅನೇಕ ವಿಷಯಗಳು ಪತ್ರಿಕೆಗಳಲ್ಲಿ ಬರುತ್ತವೆ. ಅದನ್ನು ಅವರೇ ಹೇಳುತ್ತಾರೆ. ಅದಕ್ಕಾಗಿ ಆಟ್‌ಲೀಸ್ಟ್ ಅವರ ಮನಸ್ಸಿನಲ್ಲಿ ಏನಿದೆಯೋ ಎಂಬುದನ್ನು ಇಲ್ಲಿಯಾದರೂ ಹೇಳಲಿ ಅಂತ ನಾವು ಬಯಸುತ್ತೇವೆ.

+ ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ): ಮಾನ್ಯ ಅಧ್ಯಕ್ಷರೇ, ಇದರಲ್ಲಿ ಮಡಿವಂತಿಕೆ ಏನೂ ಇಲ್ಲ. ಇದರ ಬಗ್ಗೆ ಇಲ್ಲಿ ಚರ್ಚೆ ಸಮಗ್ರವಾಗಿ ಆಗಲೇಬೇಕು. ಇದರಲ್ಲಿ ಚರ್ಚೆಯಿಂದ ತಪ್ಪಿಸಿಕೊಂಡು ಹೋಗತಕ್ಕ ಪ್ರಶ್ನೆ ಇಲ್ಲ. ಇವತ್ತು ಸದನ ಆರಂಭವಾದ ತಕ್ಷಣವೇ ಈ ವಿಚಾರ ಚರ್ಚೆಯಾಗಬೇಕಾಗಿತ್ತು ಎಂಬುದು ನನ್ನ ವೈಯಕ್ತಿಕವಾದ ಅಭಿಪ್ರಾಯ. ಆದ್ದರಿಂದ ನಾನು ತಮ್ಮಲ್ಲಿ ಮನವಿ ಮಾಡುತ್ತೇನೆ. ತಮಿಳುನಾಡಿನ ಒಬ್ಬ ಮಾಜಿ ಡಿ.ಐ.ಜಿ.ಯವರೇ ವೀರಪ್ಪನ್‌ನನ್ನು ನೇಣುಗಂಬಕ್ಕೆ ಏರಿಸಬೇಕೆಂದು ಹೇಳುತ್ತಿದ್ದಾರೆ. ಮಡಿವಂತಿಕೆ ಎಂದು ಹೇಳಿ ಈ ವಿಚಾರ ಚರ್ಚೆಯಾಗುವುದರಿಂದ ತಪ್ಪಿಸಿಕೊಳ್ಳಲಿಕ್ಕೆ ಸಾಧ್ಯವಿಲ್ಲ. ಇದರ ಬಗ್ಗೆ ಇಲ್ಲಿ ಅಮೂಲಾಗ್ರವಾಗಿ ಚರ್ಚೆಯಾಗಲೇ ಬೇಕು. ಈ ಒತ್ತೆಯಾಳುಗಳ ನಾಟಕ ಯಾವುದು? ಒತ್ತೆಯಾಳುಗಳು ಯಾರು? ಅದರಲ್ಲಿ ಯಾರ್ಯಾರು ಏನೇನು ಆಗಿದ್ದಾರೆ? ಇದರ ಹಿಂದೆ ಇರತಕ್ಕ ನಾಟಕ ಏನು? ಕರ್ನಾಟಕ ಸರ್ಕಾರಕ್ಕೂ, ಮಾನ್ಯ ಕರುಣಾನಿಧಿಯವರಿಗೂ

ನಡೆದಿರತಕ್ಕ ಮಾತುಕತೆ ಏನು? ಗೋಪ್ಯತೆ ಏನು? ಈ ಎಲ್ಲಾ ವಿಚಾರಗಳೂ ಹೊರಗಡೆ ಬರಬೇಕಲ್ಲವೇ? ಆದ್ದರಿಂದ ಈ ಬಗ್ಗೆ ಇಲ್ಲಿ ಸಮಗ್ರವಾಗಿ ಚರ್ಚೆಯಾಗಲೇ ಬೇಕು. ವೀರಪ್ಪನ್‌ನಿಂದ ಸುಮಾರು 12 ಕ್ಯಾಸೆಟ್‌ಗಳು ಬಿಡುಗಡೆ ಯಾಗಿವೆ. ಅವುಗಳಲ್ಲಿ ಯಾವ್ಯಾವ ಕ್ಯಾಸೆಟ್‌ಗಳನ್ನು ಸರ್ಕಾರ ನೋಡಿದೆ? ಯಾವ್ಯಾವ ಕ್ಯಾಸೆಟ್‌ನಲ್ಲಿ ಏನೇನು ಇದೆ, ಏನು ವಿಚಾರ ನಡೆಯುತ್ತಿದೆ ಎನ್ನುವುದು ಯಾವುದೂ ಯಾರಿಗೂ ಗೊತ್ತಿಲ್ಲ. ಸಂಪೂರ್ಣವಾಗಿ ಸರ್ಕಾರ ಈ ಬಗ್ಗೆ ಇಡೀ ರಾಜ್ಯದ ಜನತೆಯನ್ನು ಕಗ್ಗತ್ತಲಿನಲ್ಲಿ ಇಟ್ಟಿದೆ, ವಿಚಾರಗಳನ್ನು ಗೋಪ್ಯವಾಗಿಟ್ಟಿದೆ. ಇದು ಒಳ್ಳೆಯದಲ್ಲ. ಈ ಪರಿಸ್ಥಿತಿ ಇರುವಾಗ ಈ ಸದನದಲ್ಲಿ ಈ ಬಗ್ಗೆ ಸಮಗ್ರವಾಗಿ ಚರ್ಚೆಯಾಗಲೇ ಬೇಕು. ಸರ್ಕಾರ ತಾನಾಗಿಯೇ ಈ ಚರ್ಚೆ ನಡೆಸಲು ಮುಂದಾಗಿ ಅದಕ್ಕೆ ಅನುವು ಮಾಡಿಕೊಡಬೇಕಾಗಿತ್ತು. ನಾನು ನೇರವಾಗಿ ಸರ್ಕಾರದ ಮೇಲೆ ಆರೋಪಣೆ ಮಾಡುತ್ತಿದ್ದೇನೆ. ನಿಮ್ಮ ಸರ್ಕಾರ ವೀರಪ್ಪನ್‌ಗೆ ಸಂಪೂರ್ಣವಾಗಿ ಶರಣಾಗಿದೆ. ತನ್ಮೂಲಕ ಕರ್ನಾಟಕ ಪೊಲೀಸರ ಆತ್ಮಸ್ಥೈರ್ಯವನ್ನು ಕಳೆದಿದ್ದೀರಿ. ಸರ್ಕಾರ ಒಂದು ರೀತಿ ಗುಲಾಮಗಿರಿಯ ಸಂಕೇತವಾಗಿ ನಡೆದುಕೊಂಡಿದೆ. ಇದನ್ನು ನಾನು ಸ್ಪಷ್ಟವಾಗಿ ಹೇಳುತ್ತಿದ್ದೇನೆ. ಆದುದರಿಂದ ನಿಮ್ಮ ಸರ್ಕಾರ ಇದೆ ಎಂದು ನಿಮಗೆ ಮನವರಿಕೆ ಆಗಿದ್ದರೆ, ಬದುಕಿದೆ ಅಂತ ನಿಮಗೆ ಮನವರಿಕೆ ಆಗಿದ್ದರೆ ನೀವು ಪ್ರಾಮಾಣಿಕವಾಗಿ ಇವತ್ತು ಈ ಚರ್ಚೆಯನ್ನು ಆರಂಭಿಸಿ ಈ ಬಗ್ಗೆ ಒಂದು ಹೇಳಿಕೆಯನ್ನು ಕೊಡಿ. ಅದನ್ನು ಬಿಟ್ಟು ಚರ್ಚೆಯನ್ನು ಮುಂದಕ್ಕೆ ಹಾಕತಕ್ಕದ್ದು ಸರಿಯಲ್ಲ. ಅವನು ಹೆಲಿಕ್ಯಾಪ್ಟರ್‌ನಲ್ಲಿ ಬರುತ್ತಾನೆ, ಅವನನ್ನು ರಿಸೀವ್ ಮಾಡುವುದಕ್ಕೆ ನಾನೇ ಹೋಗುತ್ತೇನೆ ಎಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದನ್ನು ನಾನು ಪತ್ರಿಕೆಯಲ್ಲಿ ಓದಿದೆ. ನನಗೆ ಇದರಿಂದ ಬಹಳ ನೋವಾಯಿತು. 180 ಜನರನ್ನು ಆತ ಕೊಂದಿದ್ದಾನೆ, 40-50 ಕೋಟಿ ರೂ.ಗಳು ಸರ್ಕಾರಕ್ಕೆ ನಷ್ಟವಾಗಿವೆ, 180 ಜನರ ವಿಧವೆಯವರು ಕಣ್ಣೀರು ಇಡುತ್ತಿದ್ದಾರೆ, ಆತ ಎರಡು ಸಾವಿರ ಆನೆಗಳನ್ನು ಕೊಂದಿದ್ದಾನೆ, ಇಂತಹ ಒಬ್ಬ ಪುರುಷನನ್ನು ನೋಡತಕ್ಕಂತಹ ಸೌಭಾಗ್ಯಕ್ಕೆ ನಮ್ಮ ಮುಖ್ಯಮಂತ್ರಿಗಳು ಹೋಗುತ್ತೇನೆ ಎನ್ನುತ್ತಾರಲ್ಲಾ, ನಿಜವಾಗಲೂ ಇದಕ್ಕಿಂತ ಅತ್ಯಂತ ನೋವಿನ ಪ್ರಸಂಗ ಮತ್ತೊಂದು ಇಲ್ಲ ಎನ್ನತಕ್ಕ ಮಾತನ್ನು ನಾನು ಹೇಳುತ್ತಿದ್ದೇನೆ. ಈ ಬಗ್ಗೆ ನಾನು ಅತ್ಯಂತ ಕಳಕಳಿಯಿಂದ ಮಾತನಾಡುತ್ತಿದ್ದೇನೆ, ಸರ್ಕಾರ ಈಗ ಹೇಳಿಕೆ ಕೊಡಬೇಕು ಮತ್ತು ಚರ್ಚೆ ಇವತ್ತೇ ಆರಂಭ ಆಗಬೇಕು. ಇದು ಅಷ್ಟು ಸುಲಭವಾಗಿ ಬಿಡತಕ್ಕದ್ದಲ್ಲ. ಕರ್ನಾಟಕದ ಕಣ್ಣೀರಿನ ಕಥೆ ಇದು.

ಅಧ್ಯಕ್ಷರು: ಆಯಿತು, ಸರ್ಕಾರದವರು ಏನು ಹೇಳುತ್ತಾರೋ ನೋಡೋಣ.

ಶ್ರೀ ಎಂ.ಸಿ.ನಾಣಯ್ಯ: ಮಾನ್ಯ ಅಧ್ಯಕ್ಷರೇ, ನಾವು ಸರ್ಕಾರದ ವತಿಯಿಂದ ಯಾವುದನ್ನೂ ಬಚ್ಚಿಟ್ಟಿಲ್ಲ. ಸರ್ಕಾರ ಯಾರಿಗೂ ಶರಣಾಗತಿ ಆಗಿಲ್ಲ. ಬಹುಶಃ ನಾವು ಇದರ ಬಗ್ಗೆ ಎರಡೂ ಕಡೆಯೂ ಮಾತನಾಡಬಹುದು. ನಾವು ಏಳು ವರ್ಷಗಳಿಂದ ಇದನ್ನು ನಡೆಸಿಕೊಂಡು ಬಂದಿರತಕ್ಕದ್ದನ್ನು ನೀವೂ ನೋಡಿದ್ದೀರಿ, ನಾವೂ ನೋಡಿದ್ದೇವೆ.

8-9 ಒತ್ತೆಯಾಳುಗಳನ್ನು ಬಿಡುಗಡೆ ಮಾಡಿಸಲು ಕಾನೂನಿನ ಅಡಿಯಲ್ಲಿ ಇರತಕ್ಕಂತಹ ಸಾಧ್ಯತೆಗಳನ್ನು ಪರಿಶೀಲಿಸಲು ಮೂರು ಸಲ ಚರ್ಚೆಯಾಯಿತು. ನಾನೂ ಕೂಡ ಆ ಚರ್ಚೆಯಲ್ಲಿ ಭಾಗವಹಿಸಿದ್ದೆ. ಯಾವುದೇ ಸಂದರ್ಭದಲ್ಲೂ ಸರ್ಕಾರ ಶರಣಾಗತಿ ಆಗತಕ್ಕ ಪ್ರಶ್ನೆಯೇ ಇಲ್ಲ. ಸರ್ಕಾರ ಯಾರಿಗೂ ಶರಣಾಗತಿ ಆಗಿಲ್ಲ. ಬೇಡಿಕೆಗಳಿಗೆ ಸಂಬಂಧಪಟ್ಟಂತೆ ಕಾನೂನಿನ ಚೌಕಟ್ಟಿನಲ್ಲಿ ಯಾವುದು ಸಾಧ್ಯವಿದೆಯೋ ಅದನ್ನು ಈಡೇರಿಸುತ್ತೇವೆ, ಇಲ್ಲದಿದ್ದರೆ ಅದು ಸಾಧ್ಯವಾಗುವುದಿಲ್ಲ ಅನ್ನುವ ಮಾತನ್ನು ನಾವು ಆಡಿದ್ದೇವೆ. ಈಗ ತಮಿಳುನಾಡು ರಾಜ್ಯದ ಗೃಹ ಕಾರ್ಯದರ್ಶಿಯವರಿಂದ ಕರ್ನಾಟಕ ರಾಜ್ಯದ ಗೃಹ ಕಾರ್ಯದರ್ಶಿಯವರಿಗೆ ಒಂದು ಸಂದೇಶ ಬಂದಿದೆ. ಬಹುಶಃ ಆ ಸಂದೇಶವನ್ನು ನಾನು ಇಲ್ಲಿ ಓದಿದರೆ, ಮಾನ್ಯ ಕಾಗೋಡು ತಿಮ್ಮಪ್ಪನವರು ಹಾಗೂ ಇತರ ಸದಸ್ಯರ ಮನಸ್ಸಿನಲ್ಲಿರತಕ್ಕ ಸಂಶಯ ಸ್ವಲ್ಪ ಮಟ್ಟಿಗೆ ದೂರವಾದೀತು ಎಂದು ನಾನು ಭಾವಿಸುತ್ತೇನೆ. ಆ ಸಂದೇಶ ಈ ರೀತಿ ಇದೆ.

'All the hostages have been released by Veerappan'. Message from Home Secretary, Tamil Nadu to our Home Secratary.

> "They have come to Chennai with Gopal of Nakkeeran. Veerappan himself wants some more time to consider the surrender and as a measure of good-will, he has released these 8 hostages. The hostages have been admitted to the hospitals in Chennai for rest and minor treatment if needed, if any. They will be in Chennai for the next couple of days before the Government of Karnataka arranges for their transport."

ಇದು ಬಂದಿರತಕ್ಕಂಥ ಮೆಸೇಜ್ ಆಗಿರುತ್ತದೆ. ಅಪಹೃತರಾದ 8 ಜನರನ್ನು ಅಲ್ಲಿಂದ ಬಿಟ್ಟಿದ್ದಾರೆ. ಆ 8 ಜನರಿಗೆ ಮೈನರ್ ಟ್ರೀಟ್‌ಮೆಂಟ್‌ಗೋಸ್ಕರ ಮತ್ತು ರೆಸ್ಟ್ ತೆಗೆದುಕೊಳ್ಳುವುದಕ್ಕಾಗಿ ತಮಿಳುನಾಡಿನ ಹಾಸ್ಪೆಟಲ್‌ಗೆ ಅಡ್ಮಿಟ್ ಮಾಡಿದ್ದಾರೆ. ಅವರುಗಳು 2 ದಿವಸ ಅಲ್ಲಿ ಉಳಿದುಕೊಳ್ಳುತ್ತಾರೆ. ಅದು ಆದಮೇಲೆ ಅವರುಗಳನ್ನು ಕರ್ನಾಟಕಕ್ಕೆ ಕರೆದುಕೊಂಡು ಬರಲಿಕ್ಕೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳುತ್ತಿದ್ದೇವೆ. ಮತ್ತು 2 ರಾಜ್ಯಸರ್ಕಾರಗಳು ಮಾಡಿರತಕ್ಕಂಥ ಮನವಿ ಮತ್ತು ಒಬ್ಬ ವೀರಪ್ಪನ್ ಎನ್ನುವವನು ಯಾರು ಇದ್ದಾರೆ ಅವನು ಹಾಕಿರತಕ್ಕಂಥ ಷರತ್ತುಗಳಿಗೆ ನಾವು ಯಾವುದನ್ನು ಹೇಳಿದ್ದೇವೆ ಅದರ ಬಗ್ಗೆ 'I will take some more time.' ಎಂದು

ಗೋಪಾಲನ ಮುಖಾಂತರ ತಿಳಿಸಿದ್ದಾನೆ. ಆದ್ದರಿಂದ ಇದರ ಬಗ್ಗೆ ಇನ್ನೂ ಚರ್ಚೆ ಮಾಡಲಿಕ್ಕೆ ಇರತಕ್ಕಂಥದ್ದು ಏನು? ಎಂದು ನನಗಂತೂ ಅರ್ಥವಾಗುತ್ತಿಲ್ಲ....

ಶ್ರೀವಾಟಾಳ್ ನಾಗರಾಜ್: ಮಾನ್ಯ ಅಧ್ಯಕ್ಷರೆ, ಇದರ ಬಗ್ಗೆ ಚರ್ಚೆ ಬಹಳ ಆಗಬೇಕಿದೆ. ಇದರಲ್ಲಿ ಏನೂ ಇಲ್ಲ ಎಂದು ಹೇಳಿ ಅಷ್ಟು ಸುಲಭದಲ್ಲಿ ತಪ್ಪಿಸಿಕೊಳ್ಳುವುದಕ್ಕಾಗುವುದಿಲ್ಲ. ವೀರಪ್ಪನ್ ವಿಧಿಸಿರುವ ಷರತ್ತುಗಳೇನು? ನೀವು ಕೊಟ್ಟಿರುವ ಷರತ್ತುಗಳೇನು? ಮುಂತಾದವು ಈ ಸದನದಲ್ಲಿ ಚರ್ಚೆ ಆಗಲೇ ಬೇಕು....

ಶ್ರೀ ಎಂ.ಸಿ.ನಾಣಯ್ಯ: ಮಾನ್ಯ ಅಧ್ಯಕ್ಷರೆ, ಇದರ ಬಗ್ಗೆ ಸದನದಲ್ಲಿ ಚರ್ಚೆ ಆಗಲೇ ಬೇಕು ಎನ್ನುವುದಾದರೆ, ಕಾನೂನಿನ ಪರಿಮಿತಿಯಲ್ಲಿ ಯಾವುದನ್ನು ಮಾಡಬೇಕು ಎನ್ನುವುದನ್ನು ತೀರ್ಮಾನ ಮಾಡಿ, ಕಾನೂನಿನ ಪರಿಮಿತಿಯಲ್ಲಿದ್ದರೆ ಸರ್ಕಾರ ಯಾವುದನ್ನು ಹೇಳಲಿಕ್ಕೆ ಇಚ್ಛೆಪಡುತ್ತದೆ ಅದನ್ನು ಖಂಡಿತವಾಗಿ ಹೇಳುತ್ತೇವೆ. ಸರಕಾರ ಏನೋ ಶರಣಾಗತಿ ಆಗಿದೆ, ವೀರಪ್ಪನ್ ಹೇಳಿದ್ದೆಲ್ಲಕ್ಕೂ ಒಪ್ಪಿಕೊಂಡಿದೆ ಎಂದು ಸದಸ್ಯರು ಹೇಳುತ್ತಿದ್ದಾರೆ. ನಿಜ, ನಮ್ಮಲ್ಲಿಯೂ ಕೂಡ 56-57 ಜನ ಸತ್ತಿದ್ದಾರೆ, ತಮಿಳುನಾಡಿನಲ್ಲೂ ಕೂಡ ಸುಮಾರು 64 ಜನ ಅಧಿಕಾರಿಗಳು ಮತ್ತು ಇತರರು ಸತ್ತಿದ್ದಾರೆ....

ಶ್ರೀ ವಾಟಾಳ್ ನಾಗರಾಜ್: ವೀರಪ್ಪನ್‌ನ್ನು ಬಂಧನದಲ್ಲಿಡದೇ ಅವನನ್ನು ಮುಕ್ತನನ್ನಾಗಿ ಮಾಡುವುದು ಅನ್ಯಾಯ, ಎರಡೂ ಸರ್ಕಾರಗಳು ತೆಗೆದುಕೊಂಡ ಕ್ರಮ ಏನು ಇದೆ, ಇದು ಅಕ್ಷಮ್ಯ, ಅಪರಾಧ ಎಂದು ಹೇಳುತ್ತಿದ್ದಾರೆ, ಅವನನ್ನು ನೇಣುಗಂಬಕ್ಕೆ ಏರಿಸಬೇಕೆಂದು ತಮಿಳುನಾಡಿನ ಮಾಜಿ ಡಿ.ಐ.ಜಿ.ಯವರು ಹೇಳುತ್ತಿದ್ದಾರೆ....

ಶ್ರೀ ಎಂ.ಸಿ.ನಾಣಯ್ಯ: ದಿನನಿತ್ಯದ ಪೇಪರನ್ನು ನಾವೂ ಓದುತ್ತೇವೆ ನೀವೂ ಓದುತ್ತೀರಿ.... ಅದರ ಬಗ್ಗೆ ಚರ್ಚೆ ಆಗಲೇಬೇಕೆಂದಾದರೆ ಕಾನೂನಿನ ಪ್ರಕಾರ ನೋಟೀಸ್ ಕೊಡಿ. ನಿಯಮದ ಅಡಿಯಲ್ಲಿ ನಾವು ಚರ್ಚೆ ಮಾಡೋಣ.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಅಧ್ಯಕ್ಷರೆ, ನಾನು ಸರ್ಕಾರದ ನಿಲುವನ್ನು ಪ್ರತಿಭಟಿಸಿ ಧರಣಿ ಮಾಡುತ್ತಿದ್ದೇನೆ. ಇದರ ಬಗ್ಗೆ ಚರ್ಚೆ ಆಗಲೇ ಬೇಕು. ಕಪ್ಪು ಬಾವುಟ ಪ್ರದರ್ಶನ ಮಾಡುತ್ತೇನೆ. ಇದರಲ್ಲಿ ನಮ್ಮ ರಾಜ್ಯದ ಜನರಿಗೆ ಬಹಳ ಅನ್ಯಾಯವಾಗಿದೆ. ಇದರ ಬಗ್ಗೆ ಹಿಂದೆ ಮುಂದೆ ಹೋಗುವ ಪ್ರಶ್ನೆಯೇ ಇಲ್ಲ.

ಅಧ್ಯಕ್ಷರು: ಆ 8 ಜನ ಬದುಕಿ ರಾಜ್ಯಕ್ಕೆ ವಾಪಸ್ಸು ಬಂದರೆ ಅದು ಅನ್ಯಾಯವೇ?

ಶ್ರೀ ವಾಟಾಳ್ ನಾಗರಾಜ್: ಅವರಿಗೆ ಆಗಲಿಲ್ಲ. ಆ 8 ಜನರಲ್ಲಿ ಒಬ್ಬ 'ಬಂಧೂಕದ ವಾಲು' ಎಂದು ಒಬ್ಬ ಇದ್ದಾರೆ. ಆ ''ಬಂಧೂಕದ ವಾಲು'' ಆತ ಯಾರು? ಅವನ ಹಿನ್ನೆಲೆ ಏನು? ಇದೆಲ್ಲಾ ಬಹಳ ನಮಗೆ ಬೇಕಾಗಿದೆ. ಚರ್ಚೆಯಲ್ಲಿ ಇದೆಲ್ಲಾ ಬರುತ್ತದೆ.

ಇದನ್ನು ಅಷ್ಟು ಲಘುವಾಗಿ ಯಾರೂ ತೆಗೆದುಕೊಳ್ಳಬೇಡಿ. ಮಾನ್ಯ ಅಧ್ಯಕ್ಷರೇ, ತಮ್ಮಲ್ಲಿ ಅತ್ಯಂತ ಕಳಕಳಿಯಿಂದ ಕೇಳಿಕೊಳ್ಳುತ್ತಿದ್ದೇನೆ. ನಾನು ಸರ್ಕಾರಕ್ಕೆ ಕೇಳುತ್ತಿದ್ದೇನೆ. ನಾನೇನು ಇದರಲ್ಲಿ ರಾಜಕಾರಣ ಮಾಡುತ್ತಿಲ್ಲ. ಇದರಲ್ಲಿ ಏನೇನು ನಡೆದಿದೆ, ಇತಿಹಾಸದಲ್ಲಿ ಏನೇನು ಆಗಿದೆ, ನಮ್ಮ ಪ್ರಾಂತ್ಯದಲ್ಲಿ ಎಷ್ಟೆಷ್ಟು ಜನರನ್ನು ಕೊಂದಿದ್ದಾರೆ ಎಂಬುದೆಲ್ಲಾ ನನಗೆ ಗೊತ್ತಿದೆ....ಆಯಿತು ಬಿಡಿ. ನಾನು ಧರಣಿ ಮಾಡುತ್ತೇನೆ....ಕರ್ನಾಟಕದ ಜನತೆಗೆ ಸರ್ಕಾರ ನಡೆಸಿರತಕ್ಕಂಥ ಗೋಪ್ಯ ವಿಚಾರವೆಲ್ಲಾ ಬಹಿರಂಗವಾಗಿ ಗೊತ್ತಾಗಬೇಕು. ಸುಮ್ಮನೆ ಸರ್ಕಾರವೇ ಗೋಪ್ಯವಾಗಿ ಇಟ್ಟುಕೊಳ್ಳತಕ್ಕಂಥದ್ದು ಒಳ್ಳೆಯ ನೀತಿ ಅಲ್ಲ.

(ಈ ಹಂತದಲ್ಲಿ ವಾಟಾಳ್ ಪಕ್ಷದ ಸದಸ್ಯರಾದ ಮಾನ್ಯ ವಾಟಾಳ್ ನಾಗರಾಜ್‌ರವರು ಸದನದ ಬಾವಿಯಲ್ಲಿ ಧರಣಿ ಕುಳಿತರು)

ಅಧ್ಯಕ್ಷರು: ಶೂನ್ಯವೇಳೆಯ ಕಲಾಪ ಇಲ್ಲಿಗೆ ಮುಕ್ತಾಯವಾಯಿತು. ಈಗ ಶಾಸನ ರಚನೆ.

(5) ಶಾಸನ ರಚನೆ

(ಅ) ಕರ್ನಾಟಕ ಸಹಕಾರ ಸಂಘಗಳ (ತಿದ್ದುಪಡಿ) ವಿಧೇಯಕ, 1997 ಮಂಡನೆಗೆ ಅನುಮತಿ ಕೋರಿಕೆ.

ಶ್ರೀ ಎಸ್.ಎಸ್.ಪಾಟೀಲ್ (ಸಹಕಾರ ಮಂತ್ರಿಗಳು): ಮಾನ್ಯ ಅಧ್ಯಕ್ಷರೆ, 1997ರ ಕರ್ನಾಟಕ ಸಹಕಾರ ಸಂಘಗಳ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.

ಅಧ್ಯಕ್ಷರು: ಪ್ರಸ್ತಾವ ಏನೆಂದರೆ,

''1997ರ ಕರ್ನಾಟಕ ಸಹಕಾರ ಸಂಘಗಳ (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು.''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು.

ಶ್ರೀ ಎಸ್.ಎಸ್.ಪಾಟೀಲ್ (ಸಹಕಾರ ಮಂತ್ರಿಗಳು): ಮಾನ್ಯ ಅಧ್ಯಕ್ಷರೆ, 1997ರ ಕರ್ನಾಟಕ ಸಹಕಾರ ಸಂಘಗಳ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು: *ವಿಧೇಯಕವನ್ನು ಮಂಡಿಸಲಾಗಿದೆ*.

---

* ಅನುಬಂಧ I & II